ಅಪ್ಪರ್ ಮುಲ್ಲಾಮೂರಿ ಯೋಜನೆ

(೧೩೩೦) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಅಪ್ಪರ್ ಮುಲ್ಲಾಮೂರಿ ಯೋಜನೆಯಡಿಯಲ್ಲಿ ಬರುವ ಶರಣನಗರ ಎಂಬ ಪುನರ್‌ವಸತಿ ಗ್ರಾಮಕ್ಕೆ ಏತ ನೀರಾವರಿ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ ;

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಪ್ರಾರಂಭಿಸಲಾಗುವುದು ;

ಇ) ಇದರ ಅಂದಾಜು ವೆಚ್ಚವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಮತ್ತು ಇ) 'ಅ' ಉತ್ತರದಿಂದ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆಯ ಗ್ರಾಮಾಂತರದಲ್ಲಿ ಬಸ್‌ಗಳನ್ನು ಖರೀದಿಸಲು ಪರ್ಮಿಟ್

(೧೩೩೩) ಶ್ರೀ ಎಂ. ಪಿ. ವೆಂಕಟೇಶ್, (ಹೆಗ್ಗಡದೇವನಕೋಟೆ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಮೊಗ್ಗ ಜಿಲ್ಲೆ ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಬಸ್‌ಗಳನ್ನು ಓಡಾಡಿಸಲು ಪರವಾನಿಗೆ ಕೊಟ್ಟಿದ್ದಾರೆಯೇ ?

ಆ) ಎಲ್ಲಾ ಜಿಲ್ಲೆಗಳಲ್ಲಿ ಪರವಾನಿಗೆ ಕೊಡಲು ಸರ್ಕಾರಕ್ಕೆ ಇರುವ ತೊಂದರೆಯೇನು ?

ಇ) ಈ ಬಗ್ಗೆ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ ?

ಈ) ಈ ಬಗ್ಗೆ ಸರ್ಕಾರವು ಆದೇಶ ನೀಡಲು ಕ್ರಮ ತೆಗೆದುಕೊಂಡಿದೆಯೆ , ಹಾಗಿದ್ದಲ್ಲಿ ಯಾವಾಗ ಆದೇಶ ನೀಡಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಹೌದು.

ಆ) ಖಾಸಗಿ ಬಸ್ ಮಾಲೀಕರುಗಳಿಗೆ ರಾಜ್ಯದ ಎಲ್ಲಾ ಜಿಲ್ಲೆಗಳ ರಾಷ್ಟ್ರೀಕರಣಗೊಳ್ಳದ ಮಾರ್ಗಗಳಲ್ಲಿ ಪರವಾನಿಗೆಯನ್ನು ನೀಡಲು ಯಾವ ತೊಂದರೆಯೂ ಇರುವುದಿಲ್ಲ. ಮೋಟಾರುವಾಹನ ಕಾಯಿದೆ ೧೯೮೮ರ ೧೦ಳನೇ ವಿಧಿಯ ಅನ್ವಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸಲು ಖಾಸಗಿ ವ್ಯಕ್ತಿಗಳಿಗೆ ಪರವಾನಿಗೆ ನೀಡಲು ಕಾನೂನಿನ ಅಡ್ಡಿ ಇದೆ. ದಿನಾಂಕ ೧*೭-೧೯೮೯ರಿಂದ ಜಾರಿಗೆ ಬಂದ ಮೋಟಾರು ವಾಹನ ಕಾಯಿದೆ ೧೯೮೮ರ ಪ್ರಕಾರ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ಸುಗಳನ್ನು ಓಡಿಸಲು ರಾಷ್ಟ್ರೀಕರಣಗೊಳ್ಳದ ಮಾರ್ಗಗಳಲ್ಲಿ ಪರವಾನಿಗೆಗಳನ್ನು ಯಾವ ನಿರ್ಬಂಧವಿಲ್ಲದೇ ಮಂಜೂರು ಮಾಡುತ್ತಿವೆ.

ಇ) ಮಜಲಂ ಗಾಡಿ ವಾಹನಗಳಿಗೆ ಪರವಾನಿಗೆಯನ್ನು ನೀಡಲು ಇದ್ದ ನಿರ್ಬಂಧವನ್ನು ಹೊಸ ಮೋಟಾರು ವಾಹನ ಕಾಯಿದೆ ಪ್ರಕಾರ ಸಡಿಲಗೊಳಿಸಿದ ನಂತರ ಸಾರಿಗೆ ಇಲಾಖೆಯು ರಾಜ್ಯದಾದ್ಯಂತ ಸಾರಿಗೆ ಬೇಡಿಕೆ ಸಮೀಕ್ಷೆಯನ್ನು ನಡೆಸಿ ಸಾರಿಗೆ ಸೌಲಭ್ಯವಿಲ್ಲದ ಪ್ರದೇಶಗಳಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಿಕೊಡಲು ಕೆಳಕಂಡ ಅಂದಾಜು ಪಟ್ಟಿಯನ್ನು ತಯಾರಿಸಿದೆ.

೧.	ರಾಜ್ಯದಲ್ಲಿ ಹಾಲಿ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ	೧೮.೨೭೦
೨.	ರಾಜ್ಯದಲ್ಲಿ ಸಾರಿಗೆ ಸೌಲಭ್ಯದಿಂದ ವಂಚಿತವಾಗಿರುವ ಗ್ರಾಮಗಳ ಸಂಖ್ಯೆ	೬,೮೮೩
೩.	ಹೊಸ ಬಸ್ಸುಗಳನ್ನು ಓಡಿಸಲು ರಾಜ್ಯದಲ್ಲಿ ಗುರುತಿಸಲಾಗಿರುವ ಹೊಸ ಮಾರ್ಗಗಳ ಸಂಖ್ಯೆ	೧,೪೩೪
೪.	ಹೆಚ್ಚುವರಿಯಾಗಿ ಬೇಕಾಗಿರುವ ಬಸ್ಸುಗಳ ಸಂಖ್ಯೆ	೩,೨೯೫